**<u>ಮಾನ್ಯ ಕರ್ನಾಟಕ ವಿಧಾನ ಪರಿಷತ್ತು ಶಾಸಕರಾದ ಶ್ರೀ ಬಸನಗೌಡ ಬಾದರ್ಲಿ ರವರು ಶೂನ್ಯ ವೇಳೆಯಲ್ಲಿಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.</u>**

**<u>ವಿಷಯ:</u>** ದಿನಾಂಕ:05-08-2025 ರಂದು ಸಿಂಧನೂರಿನಲ್ಲಿ ಜಾಲಿ ಗಿಡಗಳ ತೋಟ ಎಂದು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಸಿಂಧನೂರು ನಗರದ ಹೃದಯ ಭಾಗದಲ್ಲಿರುವ ಹಿರಿಯ ತೋಟಗಾರಿಕೆ ಇಲಾಖೆ ನಿರ್ದೇಶಕರ ಕಚೇರಿಗೆ ಹೊಂದಿಕೊಂಡಿರುವ ಭೂಮಿಯಲ್ಲಿ ಸರಕಾರಿ ಹಣ್ಣಿನ ತೋಟದಲ್ಲಿ ಜಾಲಿ ಬೇಲಿ ಬೆಳೆಸಿರುವುದು ಜನರ ಅಸಮಧಾನಕ್ಕೆ ಕಾರಣವಾಗಿದೆ. ಇಲಾಖೆಗೆ ಸಂಬಂಧಿಸಿದ 19 ಎಕರೆ ಭೂಮಿ ಇದ್ದರು ಅದರಲ್ಲಿ ಗಿಡಮರ ಬೆಳೆಸದೇ ಹೊಸ ಪ್ರಯೋಗ ನಡೆಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದ್ದಾರೆ. ತೋಟಗಾರಿಕೆ ಇಲಾಖೆಯ ಯೋಜನೆ ಕುರಿತಂತೆ ಬಹುತೇಕರಿಗೆ ಮಾಹಿತಿ ಕೊರತೆಯೂ ಇದೆ. ಕೋಟಿಗಟ್ಟಲೆ ಬೆಲೆ ಬಾಳುವ ಭೂಮಿ ಇಲಾಖೆಯ ಅಧೀನದಲ್ಲಿದ್ದರೂ ಅದರ ಸದ್ಬಳಕೆ ಸಾಧ್ಯವಾಗದಿರುವುದು ನಿರ್ಲಕ್ಷ್ಯದ ಪರಮಾವಧಿ ಎನಿಸಿದೆ ಇದಲ್ಲದೆ ಹಗಲಲ್ಲಿ ಬಹಿರ್ದೆಸೆ, ಮೂತ್ರ ವಿಸರ್ಜನೆ ಹಾಗೂ ರಾತ್ರಿ ವೇಳೆ ಅನೈತಿಕ ಚಟುವಟಿಕೆಗಳ ತಾಣವಾಗಿ ತೋಟ ಬಳಕೆಯಾಗಿದ್ದು ಜನರ ಅಸಮದಾನಕ್ಕೆ ಕಾರಣವಾಗಿದೆ.

ಆದುದರಿಂದ ಹಣ್ಣಿನ ತೋಟದಲ್ಲಿ ಜಾಲಿಬೇಲಿ ಬೆಳೆಯಲು ಕಾರಣಗಳೇನು? ಯಾಕೆ ತೋಟಗಾರಿಕೆ ಇಲಾಖೆ ತನ್ನ ಅಧೀನದಲ್ಲಿದ್ದರೂ ಭೂಮಿಯನ್ನು ಅಭಿವೃದ್ಧಿ ಪಡಿಸದೆ ಇರಲು ಕಾರಣವೇನು? ಇಲಾಖಾ ಅಧಿಕಾರಿಗಳ ನಿರ್ಲಕ್ಷ್ಯವೇ? ಅನುದಾನದ ಕೊರತೆ ಇದೆಯೇ? ಎಂಬುದರ ಬಗ್ಗೆ ಮಾಹಿತಿ ನೀಡುವ ಕುರಿತು.

**<u>ಉತ್ತರ:</u>** ರಾಯಚೂರು ಜಿಲ್ಲೆಯ ಸಿಂಧನೂರು ತೋಟಗಾರಿಕೆ ಕ್ಷೇತ್ರದ ಸರ್ವೆ ನಂ.775/P1, 775/P2 ಹಾಗೂ 775/P3 ರಲ್ಲಿ ಒಟ್ಟು 24 ಎಕರೆ 11 ಗುಂಟೆ ಜಮೀನನ್ನು ಕರ್ನಾಟಕ ಸರ್ಕಾರವು 1963ರಲ್ಲಿ ಭೂ ಸ್ವಾಧೀನ ಪಡಿಸಿಕೊಂಡು 1967-68ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಸದರಿ ತೋಟಗಾರಿಕೆ ಕ್ಷೇತ್ರದಲ್ಲಿ ಒಟ್ಟು 24 ಎಕರೆ 11 ಗುಂಟೆ ಜಮೀನು ಇದ್ದು, ಸರ್ಕಾರದ ಆದೇಶದಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು ರವರಿಗೆ 2 ಎಕರೆ ಜಮೀನನ್ನು ಹಸ್ತಾಂತರಿಸಲಾಗಿದೆ. ಪ್ರಸ್ತುತ ತೋಟಗಾರಿಕೆ ಇಲಾಖೆಯ ಸುಪರ್ಧಿಯಲ್ಲಿ 22 ಎಕರೆ 11 ಗುಂಟೆ ಜಮೀನು ಇರುತ್ತದೆ.

ಸರ್ಕಾರಿ ಹಣ್ಣಿನ ತೋಟದ ಸರ್ವೆ ನಂ.775/P1, 775/P2 ಹಾಗೂ 775/P3 ರಲ್ಲಿ ಒಟ್ಟು 22 ಎಕರೆ 11 ಗುಂಟೆ ಜಮೀನಿನಲ್ಲಿ ಪ್ರಸ್ತುತ 120 ಸಪೋಟ ಮರಗಳಿದ್ದು, 58 ವರ್ಷ ಹಳೆಯದಾಗಿದ್ದು, ಯಾವುದೇ ಫಸಲನ್ನು ನೀಡುವ ಕ್ಷಮತೆ ಇರುವುದಿಲ್ಲ. ತೋಟಗಾರಿಕೆ ಕ್ಷೇತ್ರಕ್ಕೆ ನೀರಿನ ಮೂಲ ಆಧಾರವಾಗಿದ್ದ D-40 ಕಾಲುವೆಯ ಅಕ್ಕಪಕ್ಕದ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿದ್ದು, ನೀರಿನ ಕಾಲುವೆಯು ಚರಂಡಿಯಾಗಿ ಮಾರ್ಪಾಟಾಗಿರುತ್ತದೆ. ಇದರಿಂದ ತೋಟಗಾರಿಕೆ ಕ್ಷೇತ್ರದಲ್ಲಿ ನೀರಾವರಿಯ ಮೂಲವು ಇಲ್ಲದಂತಾಗಿ 250 ಸಂಖ್ಯೆಯಷ್ಟಿದ್ದ ಸಪೋಟ ಮರಗಳು ಕ್ರಮೇಣ ಒಣಗುತ್ತಾ ಸೊರಗುತ್ತಿವೆ ಹಾಗೂ ಉಳಿದಿರುವ ಮರಗಳು ಫಸಲು ಸಹ ಬಿಡದಂತಾಗಿದೆ. ಕ್ಷೇತ್ರದ ನಿರ್ವಹಣೆ ಮಾಡಲು KSHDA ಯೋಜನೆಯಡಿ ಹೊಸದಾಗಿ ಬೋರ್‌ವೆಲ್ ಗಳನ್ನು ಕೊರೆಯಿಸಲಾಗಿದ್ದು, ನೀರು ಲಭಿಸಿರುವುದಿಲ್ಲ ಹಾಗೂ ಇತರೆ ಯಾವುದೇ ನೀರಿನ ಮೂಲ ಇಲ್ಲದಿರುವುದರಿಂದಾಗಿ ಮರಗಳು ಸೊರಗುವುದು ಹೆಚ್ಚಾಗಿರುತ್ತದೆ.

ಸದರಿ ತೋಟಗಾರಿಕೆ ಕ್ಷೇತ್ರದ ಜಮೀನಿನ ಮೂಲ ಮಾಲೀಕತ್ವದ ಬಗ್ಗೆ ಜೆ.ಎಂ.ಎಫ್.ಸಿ., ಸಿಂಧನೂರು ನ್ಯಾಯಾಲಯದಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು, ರಾಯಚೂರು ರವರ ವಿರುದ್ಧ ದಾವೆಯನ್ನು ಹೂಡಲಾಗಿದೆ. (Old O.S. No. 18/10, New O.S No. 81/14). ಆದುದರಿಂದ, ತೋಟಗಾರಿಕೆ ಕ್ಷೇತ್ರದಲ್ಲಿ ಯಾವುದೇ ಕಾಮಗಾರಿ/ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಾಗಿರುವುದಿಲ್ಲ.

---2---

ಮುಂದುವರೆದು, 2024 ರಲ್ಲಿ III Addl. District & Sessions Court, Raichur sitting at Sindhanur ಇಲ್ಲಿ Misc/5312/2024 ಪ್ರಕರಣವು ದಾಖಲಾಗಿದ್ದು ಪ್ರಸ್ತುತ ವಿಚಾರಣೆ ಹಂತದಲ್ಲಿರುತ್ತದೆ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್ ಕಛೇರಿ, ಸರ್ಕಾರಿ ಹಣ್ಣಿನ ತೋಟದ ಆವರಣದಲ್ಲಿಯೇ ಇದ್ದು, ಸಿಂಧನೂರು ತಾಲ್ಲೂಕಿನ ರೈತರಿಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ ಹಾಗೂ ಇಲಾಖೆಯ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ವಲಯದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ ಸಸ್ಯಾಭಿವೃದ್ಧಿ , ಸಾಧಾರಣ ಕಾಡು ಸ್ವಚ್ಛಗೊಳಿಸುವುದಕ್ಕಾಗಿ ಹೊರ ಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆಯನ್ನು ಪಡೆಯಲು ಒಟ್ಟಾರೆ ರೂ.6.21 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಸಂಖ್ಯೆ: HORTI 423 HGM 2025

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು